# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 255/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಸಿದ್ದರಾಜು | ಪಿಡಬ್ಲ್ಯೂ : 1 |
| ತಂದೆಯ / ಗಂಡನ ಹೆಸರು | : ಮಾದಶೆಟ್ಟಿ | ಸಿಡಬ್ಲ್ಯೂ : 1 |
| ವಯಸ್ಸು | : 43 ವರ್ಷ | |
| ಉದ್ಯೋಗ | : ಶಾಮಿಯಾನ ಅಂಗಡಿ | |
| ವಾಸಸ್ಥಳ | : ಹುಣಸನಾಳು ಗ್ರಾಮ , ನಂಜನಗೂಡು ತಾಲ್ಲೂಕು , ಮೈಸೂರು ಜಿಲ್ಲೆ | |

**ಸಾಕ್ಷಿಯನ್ನು ಈ ದಿನ ದಿಃ 26.03.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನನ್ನ ಸ್ವಂತ ಊರು ಹುಣಸನಾಳು ಗ್ರಾಮ. ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು. ಅವರು ನಮ್ಮ ಊರಿನವರು. ಮೃತ ಚಿಕ್ಕರಾಜಚಶೆಟ್ಟಿ ಗೊತ್ತು. ಅವರೂ ಸಹ ನಮ್ಮ ಊರಿನವರೇ ಆಗಿದ್ದರು. ಅವರಿಗೆ ಇಬ್ಬರು ಹೆಂಡತಿಯರು. ಮೊದಲನೇ ಹೆಂಡತಿ ಬಸಮ್ಮ ಅಂದರೆ ನ್ಯಾಯಾಲಯದ ಮುಂದಿರುವ 2 ನೇ ಆರೋಪಿ. ಆಕೆಗೆ ಮೂರು ಜನ ಗಂಡು ಮಕ್ಕಳು, ಮೂರು ಜನ ಹೆಣ್ಣು ಮಕ್ಕಳು. ಅವರೆಲ್ಲರಿಗೂ ಮದುವೆಯಾಗಿದೆ. ಎಲ್ಲರೂ ಬೇರೆ ಬೇರೆ ವಾಸ ಮಾಡುತ್ತಾರೆ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಬಸಮ್ಮಳ ಮಗ. ಆತನ ಹೆಸರು ಶಿವನಾಗ. ಆತ ಗಂಡು ಮಕ್ಕಳ ಪೈಕಿ 2 ನೇ ಮಗ. ಚಿಕ್ಕರಾಚಶೆಟ್ಟಯ 2 ನೇ ಹೆಂಡತಿ ಗುಂಡ್ಲು ಪೇಟೆ

ತಾಲ್ಲೂಕಿನವರು. ಆಕೆಯ ಹೆಸರು ನನಗೆ ಗೊತ್ತಿಲ್ಲ. ಆಕೆಗೆ ಇಬ್ಬರು ಗಂಡು ಮಕ್ಕಳು. ಅವರ ಹೆಸರು ಶ್ರೀಕಂಠ ಮತ್ತು ಶಿವು ಎಂದು. ಅವರುಗಳು ಸುಮಾರು 5-6 ವರ್ಷಗಳ ಹಿಂದಿನವರೆಗೂ ನಮ್ಮ ಊರಿನಲ್ಲೇ ವಾಸವಿದ್ದರು. ಹೀಗಾಗಿ ಅವರ ಹೆಸರುಗಳು ನನಗೆ ಗೊತ್ತು.

2. ಮೃತ ಚಿಕ್ಕರಾಚಶೆಟ್ಟಿಗೆ ಆಸ್ತಿ ಅಂದರೆ ಜಮೀನು ಇದೆ. ಅದನ್ನು ಎಲ್ಲಾ ಮಕ್ಕಳಿಗೂ ತಲಾ ಒಂದೂವರೆ ಏಕರೆ ಅಥವಾ ಎರಡು ಏಕರೆಯಂತೆ ಹಂಚಿರುತ್ತಾರೆ. ಚಿಕ್ಕರಾಚಶೆಟ್ಟಿ ಈಗ ಮೃತ ಪಟ್ಟಿರುತ್ತಾರೆ. ಸುಮಾರು 5-6 ತಿಂಗಳ ಹಿಂದೆ ಅವರು ಮೃತ ಪಟ್ಟಿರುತ್ತಾರೆ. ಅವರು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಒಂದು ಜಮೀನನ್ನು ಗುತ್ತಿಗೆಗೆ ಪಡೆದು ಅಲ್ಲಿ ವಾಸ ಮಾಡುತ್ತಿದ್ದರಂತೆ. ಇತ್ತೀಚೆಗೆ ಅವರು ನಮ್ಮ ಊರಿಗೆ ಹೆಚ್ಚಾಗಿ ಬರುತ್ತಿರಲಿಲ್ಲ, ನಾನು ನೋಡಿರಲಿಲ್ಲ. ಅವರು ಮೃತ ಪಡುವ ಒಂದು ವರ್ಷದ ಹಿಂದೆ ನಾನು ಅವರನ್ನು ನಂಜನಗೂಡಿನಲ್ಲಿ ನೋಡಿದ್ದೆ. ಅವರು ತನ್ನ ಮೊದಲನೆಯ ಹೆಂಡತಿ ಮತ್ತು ಮಕ್ಕಳೊಂದಿಗೆ ಚೆನ್ನಾಗಿಯೇ ಇದ್ದರು , ಆದರೆ ಇತ್ತೀಚೆಗೆ ಏನಾಯಿತು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

3. ಈಗ್ಗೆ 5-6 ತಿಂಗಳ ಹಿಂದೆ ನಾನು ಕೆಲಸದ ಮೇಲೆ ಬೆಳಿಗ್ಗೆ ಮೈಸೂರಿಗೆ ಬಂದಿದ್ದೆ. ವಾಪಾಸ್ಸು ನಾನು ಊರಿಗೆ ಸಂಜೆ 04.00 ಗಂಟೆಗೆ ಹೋದೆ. ಆಗ ಊರಿನ ಜನರೆಲ್ಲರು ಚಿಕ್ಕರಾಚಶೆಟ್ಟಿ ಅವರ ಮನೆಯಲ್ಲಿ ಸತ್ತು ಹೋಗಿದ್ದಾರೆ ಎಂದು ಮಾತನಾಡಿಕೊಳ್ಳುತ್ತಿದ್ದರು. ಅಷ್ಟು ಹೊತ್ತಿಗೆ ಪೋಲೀಸರು ಬಂದರು. ಪೋಲೀಸರು ಮತ್ತು ನಾವು ಆ ಚಿಕ್ಕರಾಚಶೆಟ್ಟಿಯ ಮನೆಯ ಹತ್ತಿರಕ್ಕೆ ಹೋದೆವು. ಮನೆಯ ಮುಂದಿನ ಬಾಗಿಲು ಮುಚ್ಚಿತ್ತು , ಚಿಲಕಕ್ಕೆ ದಾರ ಕಟ್ಟಲಾಗಿತ್ತು. ಪೋಲೀಸರು ಆ ದಾರವನ್ನು ಬಿಚ್ಚಿ ಒಳಕ್ಕೆ ಹೋದರು. ನಾವೂ ಸಹ ಅವರೊಂದಿಗೆ ಒಳಕ್ಕೆ ಹೋದೆವು. ಆಗ 2 ನೇ ಆರೋಪಿ ಬಸಮ್ಮ

ಸಹ ಒಳಕ್ಕೆ ಬಂದಳು. ಅದು ಒಂದು ಶೆಡ್ಡು ಅಂದರೆ ಗುಡಿಸಲು ಮನೆ. ಅದರೊಳಗೆ ಚಿಕ್ಕರಾಚಶೆಟ್ಟಿ ಸತ್ತು ಬಿದ್ದಿದ್ದರು. 2 ನೇ ಆರೋಪಿ ಬಸಮ್ಮ ಚಿಕ್ಕರಾಚಶೆಟ್ಟಿಯ ತಲೆಯನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡರು. ಚಿಕ್ಕರಾಚಶೆಟ್ಟಿಯ ಮುಖ ಮತ್ತು ತಲೆಯ ಮೇಲೆ ಬಹಳ ರಕ್ತದ ಏಟುಗಳಾಗಿದ್ದವು . ಬೇರೆ ಇನ್ನೇನನ್ನು ನಾನು ನೋಡಲಿಲ್ಲ.

4. ನಂತರ ಪೋಲೀಸರು ರಾತ್ರಿ 07.30 ರಿಂದ 08.00 ಗಂಟೆಯ ಸಮಯಕ್ಕೆ ಶವವನ್ನು ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು.

5. ಚಿಕ್ಕರಾಚಶೆಟ್ಟಿಯ ತಲೆ ಮತ್ತು ಮುಖದ ಮೇಲೆ ಆಗಿದ್ದಂತಹ ರಕ್ತದ ಏಟುಗಳು ಹೇಗೆ ಆಗಿದ್ದವು ಎನ್ನುವುದು ನನಗೆ ಗೊತ್ತಿಲ್ಲ. ಏಕೆಂದರೆ ಪೋಲೀಸರೊಂದಿಗೆ ನಾನೂ ಸಹ ಆ ಗುಡಿಸಲಿನ ಒಳಕ್ಕೆ ಹೋಗಿದ್ದೆ.

6. ಘಟನೆ ನಡೆದ 5-6 ದಿನಗಳ ನಂತರ ಪೋಲೀಸರು ಮಹಜರ್ ಗೆ ಎಂದು ಕರೆದು ನನ್ನ ಸಹಿಗಳನ್ನು ಪಡೆದರು. ಅದಕ್ಕೂ ಮುನ್ನ ನಾನು ಸಹಿ ಹಾಕಿರುವುದಿಲ್ಲ.

7. ಈಗ ತೋರಿಸುತ್ತಿರುವ ದಾಖಾಲತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ದೂರು ಆಗಿದ್ದು , ಅದನ್ನು ಈಗ ನಿಪಿ 1 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 1(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಸದರಿ ಸಹಿಯನ್ನು ನಾನು ಘಟನೆ ನಡೆದ 5-6 ದಿನಗಳ ನಂತರ ಪೋಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ.

8. ಈಗ ತೋರಿಸುತ್ತಿರುವ ಇನ್ನೊಂದು ದಾಖಲಾತಿಯ ಮೇಲೂ ಸಹ ನನ್ನ ಸಹಿ ಇರುತ್ತದೆ. ಅದು ದಿಃ 01.06.2023 ರಂದು ಮಾಡಿದ ಸ್ಥಳ ಮಹಜರ್ ಆಗಿದ್ದು , ಅದನ್ನು ಈಗ ನಿಪಿ 2 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 2(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಸದರಿ ಸಹಿಯನ್ನು ನಾನು ಘಟನೆ ನಡೆದ 3-4

ದಿನಗಳ ನಂತರ ಮಹಜರ್ ಗಾಗಿ ಪೋಲೀಸರು ಬಂದಿದ್ದಾಗ ಈ ಸಹಿಯನ್ನು ಹಾಕಿರುತ್ತೇನೆ. ಅಲ್ಲಿ ಪೋಲೀಸರು ಆ ಗುಡಿಸಲಿನ ಬಾಗಿಲನ್ನು ತೆರೆದ ನಂತರ, ನನ್ನನ್ನು ಹಾಗೂ ಅಲ್ಲಿದ್ದ ಗ್ರಾಮಸ್ಥರನ್ನು, ಇದು ಹೇಗಾಯಿತು, ಏನು ಎಂದು ಕೇಳಿದರು. ನಂತರ ನನ್ನ ಸಹಿ ಪಡೆದರು. ಈ ಘಟನೆ ನಡೆದ ದಿನದಂದು ನಾನು ಯಾವ ಸಹಿಯನ್ನು ಹಾಕಿರುವುದಿಲ್ಲ. ಪೋಲೀಸರು ಶವವನ್ನು ತೆಗೆದುಕೊಂಡು ಹೋಗುವಾಗ ಆ ಶೆಡ್ಡಿನೊಳಗೆ ಇದ್ದಂತಹ ಒಂದು ಗುಂಡು ಕಲ್ಲು, ಒಂದು ಗುದ್ದಲಿ ಖಾವು, ಒಂದು ಮಚ್ಚನ್ನು ತೆಗೆದುಕೊಂಡರು. ಅವುಗಳನ್ನು ಏತಕ್ಕಾಗಿ ತೆಗೆದುಕೊಂಡರು ಎನ್ನುವುದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲು ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

**9.** ನಾನು 2 ನೇ ತರಗತಿಯವರೆಗೆ ಓದಿದ್ದೇನೆ. ನಾನು ನಂಜನಗೂಡು ರೈತ ಸಂಘದ ತಾಲ್ಲೂಕು ಉಪಾಧ್ಯಕ್ಷನಾಗಿದ್ದೇನೆ. ಹೀಗಾಗಿ ನಾನು ಆಗಾಗ್ಗೆ ಪೋಲೀಸ್ ಠಾಣೆಗಳಿಗೆ ಹೋಗುತ್ತೇನೆ. ಠಾಣೆಯ ವ್ಯವಹಾರಗಳು ಮತ್ತು ಕಛೇರಿಯ ವ್ಯವಹಾರಗಳ ಬಗ್ಗೆ ನನಗೆ ಜ್ಞಾನವಿದೆ. ನಾನು ಸಹಿ ಹಾಕುತ್ತೇನೆ. ಆದರೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ದಾಖಲಾತಿಗಳ ಬಗ್ಗೆ ತಿಳಿದುಕೊಳ್ಳದೆಯೂ ಸಹಿ ಹಾಕುತ್ತೇನೆ. ಈಗ ತೋರಿಸುತ್ತಿರೂ ಎರಡು ಪೋಟೋಗಳಲ್ಲಿ ನಾನು ಇದ್ದೇನೆ ಎನ್ನುವುದು ಸರಿ. ಸದರಿ ಪೋಟೋಗಳನ್ನು ಈಗ ನಿಪಿ 3 ಮತ್ತು 4 ಎಂದು ಗುರುತುಪಡಿಸಿಕೊಳ್ಳಲಾಯಿತು. ಸದರಿ ಪೋಟೋಗಳಲ್ಲಿ ಚಿಕ್ಕರಾಚಶೆಟ್ಟಿಯ ಶವ ಸಹ ಇದೆ ಎನ್ನುವುದು ಸರಿ. ಈ ಪೋಟೋಗಳಲ್ಲಿ

ಇನ್ನಿಬ್ಬರು ಗ್ರಾಮಸ್ಥರು ಸಹ ಇದ್ದಾರೆ. ಅವರ ಹೆಸರುಗಳು ರಾಜು ಮತ್ತು ಮಹದೇವಸ್ವಾಮಿ ಎಂದು.

10. ಚಿಕ್ಕರಾಚಶೆಟ್ಟಿಯವರು ಸುಮಾರು 20 ವರ್ಷಗಳ ಹಿಂದೆ 2 ನೇ ಮದುವೆ ಮಾಡಿಕೊಂಡು ಗುಂಡ್ಲು ಪೇಟೆ ತಾಲ್ಲೂಕಿನ ಹುಲ್ಲೇಪುರದಲ್ಲೇ ವಾಸಮಾಡುತ್ತಿದ್ದರು ಎನ್ನುವುದು ಸರಿ. ಅಪರೂಪಕ್ಕೆ ನಮ್ಮ ಊರಿಗೆ ಬಂದು ಜಮೀನನ್ನು ನೋಡಿಕೊಂಡು ಹೋಗುತ್ತಿದ್ದರು ಎನ್ನುವುದು ಸರಿ. ಜಮೀನು ವಿಷಯಕ್ಕೆ ಸಂಬಂಧಪಟ್ಟಂತೆ ಚಿಕ್ಕರಾಚಶೆಟ್ಟಿ ಮತ್ತು ಆತನ ಮೊದಲನೇ ಹೆಂಡತಿ ಬಸಮ್ಮ ಹಾಗೂ ಆಕೆಯ ಮಕ್ಕಳೊಂದಿಗೆ ತಕರಾರು ಇತ್ತು ಎನ್ನುವುದು ಸರಿ. ಚಿಕ್ಕರಾಚಶೆಟ್ಟಿ ಮೃತ ಪಡುವ ಒಂದು ವರ್ಷಕ್ಕೂ ಮುಂಚೆ ಆತ 5 ಏಕರೆ ಜಮೀನನ್ನು ಮಾರಾಟ ಮಾಡಿದ್ದರು ಎನ್ನುವುದು ಸರಿ. ಆ ರೀತಿ ಬಂದ ಹಣದಲ್ಲಿ ಭಾಗವನ್ನು ಈ ಆರೋಪಿತರಿಗೆ ಚಿಕ್ಕರಾಚಶೆಟ್ಟಿ ಕೊಟ್ಟಿರಲಿಲ್ಲ ಎನ್ನುವ ವಿಷಯ ನನಗೆ ತಿಳಿದು ಬಂತು ಎನ್ನುವುದು ಸರಿಯಲ್ಲ.

11. ಈ ಘಟನೆ ನಡೆದದ್ದು ದಿಃ 01.06.2023 ರಂದು ಎನ್ನುವುದು ಸರಿ. ಆ ದಿನ ಚಿಕ್ಕರಾಚಶೆಟ್ಟಿ ನಮ್ಮ ಊರಿಗೆ ಬಂದು ಅವರ ಜಮೀನಿನ ನಿವೇಶನಗಳನ್ನು ಅಳತೆ ಮಾಡಿಸುತ್ತಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಆರೋಪಿತರಿಬ್ಬರು ಬಂದು ಜಮೀನುಗಳನ್ನು ಅಳತೆ ಮಾಡಬಾರದೆಂದು ಆಕ್ಷೇಪಿಸಿ, ಅಳತೆ ಮಾಡಲು ಬಂದಿದ್ದವರನ್ನು ವಾಪಾಸ್ಸು ಕಳುಹಿಸಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾನು ಮೈಸೂರಿನಿಂದ ಊರಿಗೆ ಬಂದ ನಂತರ ಈ ಮೇಲ್ಕಂಡ ವಿಷಯಗಳು ತಿಳಿದು ಬಂದವು ಎನ್ನುತ್ತಾರೆ. ಊರಿಗೆ ಬಂದ ನಂತರ ನಿಮಗೆ ಈ ಆರೋಪಿತರು ಚಿಕ್ಕರಾಚಶೆಟ್ಟಿಯವರನ್ನು ತಮ್ಮ ಮನೆಗೆ ಎಳೆದುಕೊಂಡು ಹೋಗಿ ಜಗಳ

ಮಾಡಿ ಮಧ್ಯಾಹ್ನ ಸುಮಾರು 03.00 ಗಂಟೆಯಲ್ಲಿ ರಿಪೀಸ್ ಪಟ್ಟ ಮತ್ತು ಗುಂಡು ಕಲ್ಲು ಹಾಗೂ ಮಚ್ಚಿನಿಂದ ತಲೆಗೆ, ಮುಖಕ್ಕೆ ಹಾಗೂ ಮೈ ಕೈಗೆ ಹೊಡೆದು ಕೊಲೆ ಮಾಡಿ ಸಾಯಿಸಿರುತ್ತಾರೆ ಎಂದು ತಿಳಿದು ಬಂತು ಎನ್ನುವುದು ಸರಿ. ನಾನು ಗ್ರಾಮಕ್ಕೆ ಬಂದಾಗ ಸಂಜೆ ಸುಮಾರು 06.00 ಗಂಟೆ ಆಗಿತ್ತು ಎನ್ನುವುದು ಸರಿ. ಆ ಮನೆಯ ಒಳಕ್ಕೆ ಹೋಗಿ ನೋಡಿದಾಗ ಚಿಕ್ಕರಾಚಶೆಟ್ಟಿ ರಕ್ತದ ಮಡುವಿನಲ್ಲಿ ಬಿದ್ದಿದ್ದರು ಎನ್ನುವುದು ಸರಿ. ಅವರ ಮುಖ ತಲೆಗಳಿಗೆ ಪೆಟ್ಟಾಗಿದ್ದವು ಎನ್ನುವುದು ಸರಿ. ನಂತರ ನಾನು ರಾತ್ರಿ 08.00 ಗಂಟೆಯ ಸಮಯಕ್ಕೆ ನಂಜನಗೂಡು ಗ್ರಾಮಾಂತರ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ನಿಪಿ 1 ರಲ್ಲಿರುವ ಬರವಣಿಗೆ ಯಾರದ್ದು ಎಂದು ನನಗೆ ಗೊತ್ತಿಲ್ಲ. ನಾನೇ ದೂರನ್ನು ಪೋಲೀಸರಿಗೆ ಬರೆಸಿಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ. ನಂತರ ಪ್ರಕರಣವನ್ನು ದಾಖಲಿಸಿ ಪೋಲೀಸರು, ಚಿಕ್ಕರಾಚಶೆಟ್ಟಿ ಬಿದ್ದಿದ್ದ ಜಾಗಕ್ಕೆ ಬಂದರು ಎನ್ನುವುದು ಸರಿಯಲ್ಲ. ಮಧ್ಯ ರಾತ್ರಿ 11.10 ರಿಂದ ಮಧ್ಯ ರಾತ್ರಿ 12.30 ರ ವರೆಗೆ ನಾನು ತೋರಿಸಿದ ಸ್ಥಳದಲ್ಲಿ ಮಹಜರ್ ಮಾಡಿದರು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಅಲ್ಲಿ 2 ನೇ ಆರೋಪಿ ಬಸಮ್ಮ ಸಹ ಇದ್ದರು ಎನ್ನುವುದು ಸರಿಯಲ್ಲ. ಆಗ ಬಸಮ್ಮ ತೋರಿಸಿದ ಒಂದು 5 ಇಂಚು ಇರುವ ಕಬ್ಬಿಣದ ಮಚ್ಚು , ಒಂದು ಗುಂಡುಕಲ್ಲು , ಎರಡು ರಿಪೀಸ್ ಪಟ್ಟಿ , ದಪ್ಪದ ಮರದ ಪಟ್ಟಿ , ರಕ್ತವಾಗಿದ್ದ ಟವೆಲ್, ಒಂದು ರಕ್ತವಾಗಿದ್ದತಹ ಲುಂಗಿ , ರಕ್ತವಾಗಿದ್ದ ತುಂಬು ತೋಳಿನ ಶರ್ಟ, ಹಸಿರು ಬಣ್ಣದ ಎರಡು ಗಾಜಿನ ಬಳೆಯ ಚೂರುಗಳು, ಸ್ಥಳದಲ್ಲಿ ಬಿದ್ದಿದ್ದ ರಕ್ತವಾಗಿದ್ದ ಮಣ್ಣು, ರಕ್ತ ರಹಿತ ಮಣ್ಣು, ಇವುಗಳನ್ನು ಸಂಗ್ರಹ ಮಾಡಿ ಪೋಲೀಸರು ತೆಗೆದುಕೊಂಡು ಹೋದರು ಎನ್ನುವುದು ಸರಿ. (ಈಗ ನ್ಯಾಯಾಲಯದಲ್ಲಿ ಮೊಹರು ಮಾಡಿದ ಬಿಳಿಯ ಬಣ್ಣದ ಬಟ್ಟೆಯ ಪ್ಯಾಕೇಟ್

ಗಳಿಂದ ಈ ಮೇಲ್ಕಂಡ ಮಹಜರ್ ನಡಿಯಲ್ಲಿ ಅಮಾನತ್ತು ಪಡಿಸಿಕೊಂಡ ಸ್ವತ್ತುಗಳನ್ನು ಹೊರ ತೆಗೆಯಲಾಯಿತು)

12. ನ್ಯಾಯಾಲಯದ ಮುಂದಿರುವ ಮಚ್ಚನ್ನು ನೋಡಿ ಸಾಕ್ಷಿ ಗುರುತಿಸಿ , ಸದರಿ ಬಿಳಿಯ ಬಟ್ಟೆಯ ಪ್ಯಾಕ್ ನ ಮೇಲಿರುವ ಚೀಟಿಯಲ್ಲಿ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಚ್ಚನ್ನು ಈಗ ಎಂ ಒ 1 ಎಂದು ಗುರುತುಪಡಿಸಿಕೊಳ್ಳಲಾಯಿತು.

13. ನ್ಯಾಯಾಲಯದ ಮುಂದಿರುವ ಗುಂಡುಕಲ್ಲನ್ನು ನೋಡಿ ಸಾಕ್ಷಿ ಗುರುತಿಸಿ , ಸದರಿ ಬಿಳಿಯ ಬಟ್ಟೆಯ ಪ್ಯಾಕ್ ನ ಮೇಲಿರುವ ಚೀಟಿಯಲ್ಲಿ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಗುಂಡುಕಲ್ಲನ್ನು ಈಗ ಎಂ ಒ 2 ಎಂದು ಗುರುತುಪಡಿಸಿಕೊಳ್ಳಲಾಯಿತು.

14. ನ್ಯಾಯಾಲಯದ ಮುಂದಿರುವ ರಿಪೀಸ್ ಪಟ್ಟಿ ನೋಡಿ ಸಾಕ್ಷಿ ಗುರುತಿಸಿ , ಸದರಿ ಬಿಳಿಯ ಬಟ್ಟೆಯ ಪ್ಯಾಕ್ ನ ಮೇಲಿರುವ ಚೀಟಿಯಲ್ಲಿ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ರಿಪೀಸ್ ಪಟ್ಟಿಯನ್ನು ಈಗ ಎಂ ಒ 3 ಎಂದು ಗುರುತುಪಡಿಸಿಕೊಳ್ಳಲಾಯಿತು.

15. ನ್ಯಾಯಾಲಯದ ಮುಂದಿರುವ ಇನ್ನೊಂದು ಒಂದು ಅಡಿ ಉದ್ದವಿರುವ ರಿಪೀಸ್ ಪಟ್ಟಿ ನೋಡಿ ಸಾಕ್ಷಿ ಗುರುತಿಸಿ , ಸದರಿ ಬಿಳಿಯ ಬಟ್ಟೆಯ ಪ್ಯಾಕ್ ನ ಮೇಲಿರುವ ಚೀಟಿಯಲ್ಲಿ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ರಿಪೀಸ್ ಪಟ್ಟಿಯನ್ನು ಈಗ ಎಂ ಒ 4 ಎಂದು ಗುರುತುಪಡಿಸಿಕೊಳ್ಳಲಾಯಿತು.

16. ನ್ಯಾಯಾಲಯದ ಮುಂದಿರುವ ಮರದ ಪಟ್ಟಿ ನೋಡಿ ಸಾಕ್ಷಿ ಗುರುತಿಸಿ , ಸದರಿ ಬಿಳಿಯ ಬಟ್ಟೆಯ ಪ್ಯಾಕ್ ನ ಮೇಲಿರುವ ಚೀಟಿಯಲ್ಲಿ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮರದ ಪಟ್ಟಿಯನ್ನು ಈಗ ಎಂ ಒ 5 ಎಂದು ಗುರುತುಪಡಿಸಿಕೊಳ್ಳಲಾಯಿತು.

17. ನ್ಯಾಯಾಲಯದ ಮುಂದಿರುವ ಟವೆಲ್ ನ್ನು ನೋಡಿ ಸಾಕ್ಷಿ ಗುರುತಿಸಿ , ಸದರಿ ಬಿಳಿಯ ಬಟ್ಟೆಯ ಪ್ಯಾಕ್ ನ ಮೇಲಿರುವ ಚೀಟಿಯಲ್ಲಿ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಟವೆಲನ್ನು ಈಗ ಎಂ.ಒ 6 ಎಂದು ಗುರುತುಪಡಿಸಿಕೊಳ್ಳಲಾಯಿತು.

18. ನ್ಯಾಯಾಲಯದ ಮುಂದಿರುವ ಲುಂಗಿ ನೋಡಿ ಸಾಕ್ಷಿ ಗುರುತಿಸಿ , ಸದರಿ ಬಿಳಿಯ ಬಟ್ಟೆಯ ಪ್ಯಾಕ್ ನ ಮೇಲಿರುವ ಚೀಟಿಯಲ್ಲಿ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಲುಂಗಿ ಈಗ ಎಂ ಒ 7 ಎಂದು ಗುರುತುಪಡಿಸಿಕೊಳ್ಳಲಾಯಿತು.

19. ನ್ಯಾಯಾಲಯದ ಮುಂದಿರುವ ಶರ್ಟ ನೋಡಿ ಸಾಕ್ಷಿ ಗುರುತಿಸಿ , ಸದರಿ ಬಿಳಿಯ ಬಟ್ಟೆಯ ಪ್ಯಾಕ್ ನ ಮೇಲಿರುವ ಚೀಟಿಯಲ್ಲಿ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಶರ್ಟ ನ್ನು ಈಗ ಎಂ ಒ 8 ಎಂದು ಗುರುತುಪಡಿಸಿಕೊಳ್ಳಲಾಯಿತು.

20. ನ್ಯಾಯಾಲಯದ ಮುಂದಿರುವ ಹಸಿರು ಬಣ್ಣದ ಗಾಜಿನ ಬಳೆಯ ಚೂರುಗಳು ನೋಡಿ ಸಾಕ್ಷಿ ಗುರುತಿಸಿ , ಸದರಿ ಬಿಳಿಯ ಬಟ್ಟೆಯ ಪ್ಯಾಕ್ ನ ಮೇಲಿರುವ ಚೀಟಿಯಲ್ಲಿ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಹಸಿರು ಬಣ್ಣದ ಗಾಜಿನ ಬಳೆಯ ಚೂರುಗಳನ್ನು ಈಗ ಎಂ ಒ 9 ಎಂದು ಗುರುತುಪಡಿಸಿಕೊಳ್ಳಲಾಯಿತು.

21. ನ್ಯಾಯಾಲಯದ ಮುಂದಿರುವ ರಕ್ತ ಮಿಶ್ರಿತ ಮಣ್ಣು ನೋಡಿ ಸಾಕ್ಷಿ ಗುರುತಿಸಿ , ಸದರಿ ಬಿಳಿಯ ಬಟ್ಟೆಯ ಪ್ಯಾಕ್ ನ ಮೇಲಿರುವ ಚೀಟಿಯಲ್ಲಿ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ರಕ್ತ ಮಿಶ್ರಿತ ಮಣ್ಣನ್ನು ಈಗ ಎಂ ಒ 10 ಎಂದು ಗುರುತುಪಡಿಸಿಕೊಳ್ಳಲಾಯಿತು.

22. ನ್ಯಾಯಾಲಯದ ಮುಂದಿರುವ ರಕ್ತ ಮಿಶ್ರಿತವಲ್ಲದ ಮಣ್ಣು ನೋಡಿ ಸಾಕ್ಷಿ ಗುರುತಿಸಿ , ಸದರಿ ಬಿಳಿಯ ಬಟ್ಟೆಯ ಪ್ಯಾಕ್ ನ ಮೇಲಿರುವ ಚೀಟಿಯಲ್ಲಿ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ರಕ್ತ ಮಿಶ್ರಿತವಲ್ಲದ ಮಣ್ಣು ಈಗ ಎಂ ಒ 11 ಎಂದು ಗುರುತುಪಡಿಸಿಕೊಳ್ಳಲಾಯಿತು.

23. ಆ ಸಮಯದಲ್ಲಿ ನಿಪಿ 3 ಮತ್ತು 4, ಈಗ ತೋರಿಸುತ್ತಿರುವ ಪೋಟೋಗಳನ್ನು ತೆಗೆದರು ಎನ್ನುವುದು ಸರಿ. ಸಾಕ್ಷಿ ಉಳಿದ 4 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ 4 ಪೋಟೋಗಳನ್ನು ನಿಪಿ 5 ರಿಂದ 8 ಎಂದು ಗುರುತುಪಡಿಸಿಕೊಳ್ಳಲಾಯಿತು.

24. ಮೃತ ಚಿಕ್ಕರಾಚಶೆಟ್ಟಿ ಮತ್ತು ಆರೋಪಿತರ ನಡುವೆ ಜಮೀನಿಗೆ ಸಂಬಂಧಪಟ್ಟಂತೆ ತಕರಾರುಗಳು ಇದ್ದು, ಪ್ರಕರಣಗಳು ಸಹ ನ್ಯಾಯಾಲಯದಲ್ಲಿ ದಾಖಲಾಗಿದ್ದ ವಿಷಯ ನನಗೆ ಗೊತ್ತಿತ್ತು ಎನ್ನುವುದು ಸರಿಯಲ್ಲ. ಈ ವಿಷಯ ನನಗೆ ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

25. ಚಿಕ್ಕರಾಚಶೆಟ್ಟಿಯವರ ಶವ ಇದ್ದಂತಹ ಮನೆಯಲ್ಲಿ ಅವರ ಮಗ ಶ್ರೀಕಂಠ ಹಾಗೂ ಆತನ ಕುಟುಂಬ ವಾಸವಿತ್ತು ಎನ್ನುವುದು ಸರಿ. ನಾನು ಮೈಸೂರಿನಿಂದ ವಾಪಾಸ್ಸು ಊರಿಗೆ ಹೋದ ನಂತರ ಚಿಕ್ಕರಾಚಶೆಟ್ಟಿಯವರ ಸಾವು ಆಗಿರುತ್ತದೆ ಎಂದು ವಿಷಯ ತಿಳಿದು ಬಂತೇ ವಿನಃ, ಅವರ ಸಾವಿಗೆ ಯಾರು ಕಾರಣ ಎನ್ನುವುದು ನನಗೆ ತಿಳಿದು ಬರಲಿಲ್ಲ. ನಿಪಿ 1 ದೂರನ್ನು ಯಾರು ಬರೆದಿರುತ್ತಾರೆ ಮತ್ತು ಯಾರು ಹೇಳಿಸಿ ಬರೆಯಿಸಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಅದರಲ್ಲಿ ಬರೆದಿರುವ ವಿಷಯಗಳನ್ನು ಪೋಲೀಸರು ನನಗೆ ಓದಿ ಹೇಳಿರುವುದಿಲ್ಲ ಎನ್ನುವುದು ಸರಿ. ಪೋಲೀಸರು ಬಂದಾಗ ನಾವುಗಳು ಅವರೊಂದಿಗೆ ಆ ಗುಡಿಸಲು ಮನೆಯ ಒಳಗೆ ಹೋದಾಗ , ಆ ಶವದ ಪಕ್ಕದಲ್ಲಿ , ನಾನು ಈಗ ನ್ಯಾಯಾಲಯದ ಮುಂದೆ ನೋಡಿದ ಎಂ ಒ 1 ರಿಂದ 11 ಇದ್ದವು ಎನ್ನುವುದು ಸರಿ . ಪೋಲೀಸರು ಮತ್ತು ನಾವು ಒಳಗೆ ಹೋದ ನಂತರ, 2 ನೇ ಆರೋಪಿ ಬಸಮ್ಮ ಆ ಮನೆಯ ಒಳಕ್ಕೆ ಬಂದರು ಎನ್ನುವುದು ಸರಿ . ಪೋಲೀಸರು ಸ್ಥಳದಲ್ಲಿ ಪೋಟೋಗಳನ್ನು ತೆಗೆಸಿ , ಅಲ್ಲಿದ್ದ ವಸ್ತುಗಳನ್ನು ತೆಗೆದುಕೂಂಡು , ಶವವನ್ನು ತೆಗೆದುಕೊಂಡು ನಂಜನಗೂಡಿಗೆ ಬಂದರು ಎನ್ನುವುದು ಸರಿ . ಆಗ ಆ ಮನೆಯ ಒಳಗೆ ಯಾವುದೇ ಬರವಣಿಗೆಯನ್ನು ಮಾಡಿರುವುದಿಲ್ಲ. ಅದಾದ 5-6 ದಿನಗಳ ನಂತರ ಪೋಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಈಗ ನೋಡಿದ ಎಂ ಒ 1 ರಿಂದ 11 ರ ಬಟ್ಟೆಯ ಬಿಳಿಯ ಪ್ಯಾಕೆಟ್ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ನನ್ನ ಸಹಿಗಳನ್ನು ಪಡೆದರು ಎನ್ನುವುದು ಸರಿ. ಆಗಲೇ ಮಹಜರ್ ಮೇಲೆ ನನ್ನ ಸಹಿಯನ್ನು ಪಡೆದರು

ಎನ್ನುವುದು ಸರಿ. ನಿಪಿ 2 ರಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ ಎನ್ನುವುದು ಸರಿ.

**26.** ನಾನು ಚಿಕ್ಕರಾಚಶೆಟ್ಟಿಯ ಮೊದಲನೇ ಹೆಂಡತಿ ಮಕ್ಕಳು ಹಾಗೂ 2 ನೇ ಹೆಂಡತಿ ಮತ್ತು ಮಕ್ಕಳೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿರುತ್ತೇನೆ ಎನ್ನುವುದು ಸರಿ .

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**